5111 (5748) ಶ್ರೀ ಧರ್ಮೇಗೌಡ ಎಸ್. ಎಲ್. (ಬೀರೂರು): ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ತೆಲುಗುಗೌಡ ಜನಾಂಗದವರು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿರುವುದು ನಿಜವೆ;

ಆ) ಹಾಗಿದ್ದಲ್ಲಿ ಈ ಜನಾಂಗದವರನ್ನು ಯಾವ ಯಾವ ಜಿಲ್ಲೆಗಳಲ್ಲಿ ಮೀಸಲಾತಿ ವ್ಯಾಪ್ತಿಯಲ್ಲಿ ಗುರುತಿಸಲಾಗಿದೆ;

ಇ) ಹಾಗಿದ್ದಲ್ಲಿ ಇವರು ಶಿಕ್ಷಣ, ಉದ್ಯೋಗ ಹಾಗೂ ರಾಜಕೀಯದಲ್ಲಿ ಮೀಸಲಾತಿ ಪಡೆಯಲು ಅರ್ಹರೆ;

ಈ) ಹಾಗಿದ್ದಲ್ಲಿ ತೆಲುಗುಗೌಡ ಜನಾಂಗದವರನ್ನು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಅಂತಿಮವಾಗಿ ಯಾವಾಗ ಸೇರಿಸಲಾಗುವುದು?

ಡಾ: ವೈ. ನಾಗಪ್ಪ (ಮಾನ್ಯ ಸಮಾಜ ಕಲ್ಯಾಣ ಸಚಿವರು) :

ಅ) ಹೌದು. ತೆಲುಗುಗೌಡ ಜಾತಿಯನ್ನು ಹಿಂದುಳಿದ ಪ್ರವರ್ಗ–1ರ ಕ್ರಮ ಸಂಖ್ಯೆ 86 (ಡಬ್ಲ್ಯು)ರಲ್ಲಿ ಸೇರಿಸಲಾಗಿದೆ.

ಆ) ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳ ತೆಲುಗುಗೌಡ ಜನಾಂಗದವರನ್ನು ಪ್ರವರ್ಗ–1 ರಡಿ ಗೊಲ್ಲ ಜಾತಿಗೆ ಉಪಜಾತಿಯಾಗಿ ದಿನಾಂಕ: 30–03–2002ರ ಆದೇಶದಲ್ಲಿ ಸೇರಿಸಲಾಗಿದೆ.

ಇ) ಹಾಲಿ ಜಾರಿಯಲ್ಲಿರುವ ದಿನಾಂಕ: 30–03–2002ರ ಸರ್ಕಾರದ ಆದೇಶದ ಅನ್ವಯ ಈ ಜನಾಂಗದವರು, ಶಿಕ್ಷಣ ಹಾಗೂ ಉದ್ಯೋಗಕ್ಕೆ ಮಾತ್ರ ಮೀಸಲಾತಿಗೆ ಅರ್ಹರು, ರಾಜಕೀಯ ಮೀಸಲಾತಿ ವಿಷಯವು ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

5112 (5989) ಶ್ರೀ ಧರ್ಮೇಗೌಡ ಎಸ್. ಎಲ್. (ಬೀರೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಮಂಗಳೂರು ಜಿಲ್ಲೆಯಲ್ಲಿ ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ರಮದಡಿ ಮೂರು ವರ್ಷದಿಂದ ಅಂತರ್‌ಜಾತಿ ವಿವಾಹವಾದ ದಂಪತಿಗಳಿಗೆ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಲಾಗುತ್ತಿದೆ? (ವರ್ಷಾವಾರು ವಿವರ ನೀಡುವುದು)

ಆ) ಇದುವರೆವಿಗೆ ಎಷ್ಟು ದಂಪತಿಗಳಿಗೆ ಧನ ಸಹಾಯ ಮಾಡಲಾಗಿದೆ?

ಇ) ಎಷ್ಟು ದಂಪತಿಗಳಿಗೆ ಧನಸಹಾಯವನ್ನು ನೀಡಲು ಬಾಕಿ ಇದೆ; (ವಿವರ ಒದಗಿಸುವುದು)

ಈ) ಈ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ಡಾ: ವೈ. ನಾಗಪ್ಪ (ಮಾನ್ಯ ಸಮಾಜ ಕಲ್ಯಾಣ ಸಚಿವರು) :

ಅ) ಚಿಕ್ಕಮಗಳೂರು ಜಿಲ್ಲೆಯ ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ರಮದಡಿ ಮೂರು ವರ್ಷದಿಂದ ಅಂತರ್‌ಜಾತಿ ವಿವಾಹವಾದ ದಂಪತಿಗಳಿಗೆ ಸರ್ಕಾರ ಬಿಡುಗಡೆ ಮಾಡಿದ ವಿವರ: